30

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **1124** |
| ಸದಸ್ಯರ ಹೆಸರು | : | ಡಾ॥ ಜೈಮಾಲ ರಾಮಚಂದ್ರ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 13-03-2020 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪೋಷಣ ಅಭಿಯಾನ ಯೋಜನೆ ಚಾಲನೆಗೆ ಬಂದಿರುವುದು ಯಾವಾಗ; | ಕೇಂದ್ರ ಸರ್ಕಾರವು ಪೋಷಣ್ ಅಭಿಯಾನ ಯೋಜನೆಯನ್ನು 8ನೇ ಮಾರ್ಚ್ 2018ರಿಂದ ಚಾಲನೆ ನೀಡಿರುತ್ತದೆ.<br><br>ಯೋಜನೆಯನ್ನು ಚಾಲನೆಗೊಳಿಸಲು ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಮಮಇ 20 ಐಸಿಡಿ 2018 ದಿನಾಂಕ:31.05.2018 (19 ಜಿಲ್ಲೆಗಳಿಗೆ) ಹಾಗೂ ಮಮಇ 74 ಐಸಿಡಿ 2019 ದಿನಾಂಕ:19.10.2019 (11 ಜಿಲ್ಲೆಗಳಿಗೆ) ಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. |
| ಆ. | ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ರಾಜ್ಯದ ಪಾಲು ಎಷ್ಟು; ಕೇಂದ್ರದ ಪಾಲುಗಳೆಷ್ಟು; | ಕೇಂದ್ರ ಸರ್ಕಾರದ ಪಾಲು : 60%<br>ರಾಜ್ಯ ಸರ್ಕಾರದ ಪಾಲು : 40% |
| ಇ. | ಈ ಯೋಜನೆಯ ಪ್ರಯೋಜನಗಳೇನು; | **ಈ ಯೋಜನೆಯ ಉದ್ದೇಶಗಳು ಕೆಳಕಂಡಂತಿವೆ:**<br><br>• ಮಕ್ಕಳಲ್ಲಿನ ಕುಂಠಿತ ಬೆಳವಣಿಗೆಯನ್ನು ಕಡಿಮೆಗೊಳಿಸುವುದು.<br>• ಮಕ್ಕಳಲ್ಲಿನ ಅಪೌಷ್ಠಿಕತೆಯ (ಕಡಿಮೆ ತೂಕದ ಸರಾಸರಿ ಪ್ರಮಾಣ) ಕಡಿಮೆಗೊಳಿಸವುದು.<br>• ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣ ಕಡಿಮೆಗೊಳಿಸುವುದು.<br>• ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ರಕ್ತಹೀನತೆಯ ಪ್ರಮಾಣವನ್ನು ಕಡಿಮೆಗೊಳಿಸುವುದು.<br>• ಕಡಿಮೆ ತೂಕದ ಜನನಗಳ ಪ್ರಮಾಣವನ್ನು ಕಡಿಮೆಗೊಳಿಸುವುದು.<br><br>ಈ ಮೇಲಿನ ಪ್ರಯೋಜನಗಳನ್ನು ಸಾಧಿಸಲು ಹಾಗೂ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಮುಂತಾದ ಹಕ್ಕುದಾರ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ. |

| | | |
|---|---|---|
| | | ಯೋಜನೆಯ ಪರಿಣಾಮಕಾರಿಯಾದ ಅನುಷ್ಠಾನಕ್ಕಾಗಿ ಈಗಾಗಲೇ ಅಂಗನವಾಡಿಗಳಿಗೆ ಈ ಯೋಜನೆಯಡಿ ಹೊಸದಾಗಿ 4 ಬೆಳವಣಿಗೆ ಮಾಪಕಗಳಾದ ಸ್ಟೇಡಿಯೊ ಮೀಟರ್, ಇನಫ್ಯಾಂಟೊ ಮೀಟರ್, ತಾಯಿ ಮತ್ತು ಮಗುವಿನ ತೂಕದ ಯಂತ್ರ ಮತ್ತು ಮಗುವಿನ ತೂಕದ ಮಾಪಕಗಳನ್ನು 19 ಜಿಲ್ಲೆಗಳ ಅಂಗನವಾಡಿಗಳಿಗೆ ಈಗಾಗಲೇ ಪೂರೈಸಲಾಗಿದೆ. ಉಳಿದ 11 ಜಿಲ್ಲೆಗಳಿಗೆ ಪೂರೈಸಲು ಆದೇಶ ನೀಡಲಾಗಿದೆ.<br><br>ರಾಜ್ಯದ 19 ಜಿಲ್ಲೆಗಳಿಗೆ ಸ್ಮಾರ್ಟ್‌ಪೋನ್ ಮತ್ತು ಪವರ್ ಬ್ಯಾಂಕ್‌ಗಳನ್ನು ಖರೀದಿಸಲು ಅದೇಶ ನೀಡಲಾಗಿದೆ.<br><br>ಈಗ ಮಾರ್ಚ್ 8 ರಿಂದ 22ರವರೆಗೆ ರಾಜ್ಯಾದ್ಯಂತ ಪೋಷಣ ಪಕ್ವಾಡ ಕಾರ್ಯಕ್ರಮ ಸಂಘಟಿಸಿ, ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಸಾರ್ವಜನಿಕರು ಹಾಗೂ ಫಲಾನುಭವಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. |
| ಈ | ಈ ಯೋಜನೆಯು ಸಮರ್ಪಕವಾಗಿ ಸಂಬಂಧ ಪಟ್ಟವರಿಗೆ ತಲುಪಿದೆಯೇ? | ಹೌದು |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ : ಮಮಇ 70 ಐಸಿಡಿ 2020